# 17

# “ಕಾಲವು ಹತ್ತಿರವಾಯಿತು”

## (ಯೋಹಾನ 16)

*“ಈ ಸಂಗತಿಗಳನ್ನು ಗೂಢಾರ್ಥವಾಗಿ ನಿಮಗೆ ಹೇಳಿದ್ದೇನೆ; ಆದರೆ ಇನ್ನು ಮೇಲೆ ಸಾಮ್ಯರೂಪವಾಗಿ ನಿಮ್ಮ ಸಂಗಡ ಮತಾಡದೆ ತಂದೆಯ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸುವ ಕಾಲ ಬರುತ್ತದೆ. ಆ ದಿನದಲ್ಲಿ ನನ್ನ ಹೆಸರಿನ ಮೇಲೆ ಬೇಡಿಕೊಳ್ಳುವಿರಿ. ನಾನು ತಂದೆಯನ್ನು ನಿಮಗೋಸ್ಕರ ಕೇಳಿಕೊಳ್ಳುವೆನೆಂತ ನಿಮಗೆ ಹೇಳುವದಿಲ್ಲ; ನೀವು ನನ್ನ ಮೇಲೆ ಮಮತೆಯಿಟ್ಟು ನನ್ನನ್ನು ತಂದೆಯ ಬಳಿಯಿಂದ ಹೊರಟುಬಂದವನೆಂದು ನಬಿದ್ದರಿಂದ ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ. ತಂದೆಯ ಬಳಿಯಿಂದ ಹೊರಟು ಈ ಲೋಕಕ್ಕೆ ಬಂದಿದ್ದೇನೆ; ಇನ್ನು ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋ ಗುತ್ತೇನೆ ಅಂದನು” (ವಚನಗಳು 25-28).*

ವಿವಿಧ ಹಿನ್ನಲೆಯಲ್ಲಿ, ಹಾಗೂ ತನ್ನ ಸೇವೆಯಲ್ಲಿ ಯೇಸು ಹಲವಾರು ಬಾರಿ, “ಗಳಿಗೆ” ಹತ್ತಿರವಾಯಿತು ಎಂದು ತಿಳಿಸಿರುವನು. ತನ್ನ ದೈವತ್ವವನ್ನು ತೋರುವ ಗಳಿಗೆಯ ಕುರಿತು ಹೇಳಿದನು. ಗಲಿಲಾಯದ ಕಾನಾ ಊರಿನ ಮದುವೆಯ ಸಂದರ್ಭದಲ್ಲಿ, “ತನ್ನ ತಾಯಿಗೆ, ಅಮ್ಮ ನನ್ನ ಗೂಡವೆ ನಿನಗೇಕೆ? ನನ್ನ *ಸಮಯವು* ಇನ್ನು ಬಂದಿಲ್ಲ” ಅಂದನು (ಯೋಹಾನ 2:4; ಒತ್ತಿ ಹೇಳಿದ್ದು ನನ್ನದು). “ತಂದೆಯನ್ನು ಆರಾಧಿಸುವ *ಸಮಯವನ್ನು* ಕುರಿತು ಸಹ ಇದೇ ರೀತಿ ಹೇಳಿರುವನು. ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ” (ಯೋಹಾನ 4:23; ಒತ್ತಿ ಹೇಳಿದ್ದು ನನ್ನದು). ಹೌದು ತನ್ನ ಕ್ರೂಜೆಯ ಮರಣದ ವಿಷಯದಲ್ಲೂ ಸಮಯದ ಕುರಿತು ಹೇಳಿರುವನು. ಲಾಜರನ ಸಮಾಧಿಯ ಬಳಿಯಲ್ಲಿ, “ಈಗ ನನ್ನ ಪ್ರಾಣವು ತತ್ತರಿಸುತ್ತದೆ ಮತ್ತು ನಾನೇನು ಹೇಳಲಿ? ತಂದೆಯೇ ಈ *ಕಾಲದೊಳಗಿಂದ* ನನ್ನನ್ನು ತಪ್ಪಿಸು ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು” (ಯೋಹಾನ 12:27; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದನು.

ಗುರುವಾರದ ತಡರಾತ್ರಿಯಲ್ಲಿ, ಆತನನ್ನು ಹಿಡಿಯುವದಕ್ಕಾಗಿ ಜನರು ಬರುವಾಗ, ಯೇಸು ತನ್ನ ಅಪೊಸ್ತಲರೊಂದಿಗೆ, ಮುಂದೆ ಬರಲಿರುವ ಆಶ್ಚರ್ಯವಾದ ಕಾಲವು ತೀರಿದ ನಂತರ ಮಹಿಮೆಯುಳ್ಳ ಕಾಲವು ಬರುವದೆಂದು ಹೇಳಿದನು. ಅರ್ಥಗರ್ಭಿತವಾದ ಸ್ವರದಿಂದ ಆತನು, ಕಾಲವು ಬರುತ್ತದೆ ಎಂದು ಹೇಳಿದನು (16:25). ಕಾಲಾನು ಕ್ರಮದಲ್ಲಿ ಬಂದ ಅಲ್ಪ ಸಮಯದ ಕುರಿತು ಆತನು ಹೇಳಲಿಲ್ಲ ಯಾಕೆಂದರೆ ಅದು ಬೇಗನೆ ಮಿಂಚಿ ಹೋಗುವದಿತ್ತು. ಆತನು ಒಂದು ನಿಗದಿತವಾದ ಸಮಯವನ್ನು ಆಯ್ಕೆಮಾಡಿ, ಆ ಸಮಯದಲ್ಲಿ ಎಲ್ಲವನ್ನು ನೆರವೇರಿ ಸಿದನು. ಅಲ್ಲಿಂದಲೇ ಒಂದು ಕ್ರೈಸ್ತ ಯುಗವು ಆರಂಭವಾಯಿತು. ಈ ವಿಧವಾದ ಭರವಸದ ನಿಮಿತ್ತ ಅಪೊಸ್ತಲರಿಗೆ ಸಂತೈಸುವಿಕೆ ಉಂಟಾಯಿತು. ತಾನು ಹೊರಟು ಹೋಗುವದಕ್ಕಿಂತ ಮೊದಲು, ಯೇಸು ಈ ವಿಧವಾದ ಸಂತೈಸುವಿಕೆಯ ಕೊನೆಯ ಪ್ರಯತ್ನ ಮಾಡಿದನು.

ಆತನು ತೋರಿದ ಈ ಸಮಯದ ಕುರಿತು ಆಲೋಚಿಸೋಣ. ಈ ನೇರವೇರಿಕೆಯ ಗಳಿಗೆಯನ್ನು ಅಪ್ಪಿಕೊಳ್ಳಲು ಪ್ರಯತ್ನಿಸೋಣ. ಅಪೊಸ್ತಲರು ಅದನ್ನೇ ಮಾಡಿದರು.

## ಅರ್ಥಮಾಡಿಕೊಂಡ ಒಂದು ಗಳಿಗೆ

*ಮೊದಲನೆಯದಾಗಿ ಇದು ಅರ್ಥಮಾಡಿಕೊಳ್ಳುವ ಸಮಯವಾಗಿತ್ತು.* ಯೇಸು ಅವರಿಗೆ, “ಈ ಸಂಗತಿಗಳನ್ನು ಗೂಢಾರ್ಥವಾಗಿ ನಿಮಗೆ ಹೇಳಿದ್ದೇನೆ” (16:25) ಅಂದನು.

ಯೇಸು ತನಗೆ ದೇವರ ಚಿತ್ತದ ಪ್ರಕಾರ ಜರುಗುವ ಕಾರ್ಯದ ಕುರಿತಾದ ಗೂಢಾರ್ಥಗಳನ್ನು ಬಯಲು ಮಾಡಿದನು. ಅಪೊಸ್ತಲರು ಹಾಗೂ ಹೊಸ ಒಡಂಬಡಿಕೆಯ ಯುಗವು ದೇವರ ಯೋಜನೆಯನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳುವ ಸಮಯದಲ್ಲಿದ್ದರು. ಕರ್ತನು ಈಗಾಗಲೇ ಗುಢಾರ್ಥವಾಗಿ ಮಾತನಾಡಿದ್ದನು: ದ್ರಾಕ್ಷೇ ಬಳ್ಳಿಯ (15:1-8). ಹಾಗೂ ಪ್ರಸವ ವೇದನೆ ಪಡುವ ಸ್ತ್ರೀಯ ಉದಾಹರಣೆಯನ್ನು ನೀಡಿದ್ದನು (16:20-22). ಮುಂದಿನ ದರ್ಶನವಾಗುವವರೆಗೆ ಈ ಸತ್ಯಾಂಶಗಳು ಕೇಳುಗರಿಗೆ ಸಾಕಾಗಿದ್ದವು. ಆತನ ಸೇವೆಯು, ವಿಧವಿಧವಾದ ಸಾಮ್ಯಗಳನ್ನು ಉದಹರಣೆಗಳನ್ನೂ ಹಾಗೂ ಚಿತ್ರಣಗಳನ್ನು ಒಳಗೊಂಡಿದ್ದವು. ಈ ವಿಧವಾದ ಉದಾಹರಣೆಗಳು ಅನಗತ್ಯ ಎಂಬ ಸಮಯವು ಬಂದಿತ್ತು.

ಅಪೊಸ್ತಲರು ಪವಿತ್ರಾತ್ಮನಿಂದ ತುಂಬಲ್ಪಟ್ಟರು ಅವರು ದೇವರ ಯೋಜನೆಯ ಪೂರ್ಣವಾದ ತಿಳುವಳಿಕೆಯನ್ನು ಹೊಂದಿದರು. ಅವರು ಬರೆದ ಹಾಗೂ ಉಪದೇಶಿಸಿದ ಸಂದೇಶಗಳಿಂದ, ನಂಬುವವರೆಲ್ಲರಿಗೆ ತಿಳುವಳಿಕೆಯ ಪ್ರಕಟಣೆ ಉಂಟಾಯಿತು. ಪೂರ್ಣ ತಿಳಿವಳಿಕೆಯ ಪ್ರಕಟನೆಯ ಸಮಯವ ಆರಂಭವಾಗಿ ಕ್ರೈಸ್ತತ್ವದ ಉದಯ ವಾಯಿತು. ನಂಬುವವರು ಸತ್ಯವನ್ನರಿತು, ಗೊಂದಲ ಹಾಗೂ ಅಜ್ಞಾನದಿಂದ ಬಿಡುಗಡೆ ಹೊಂದಬಹುದಿತ್ತು. ಹಾಗೂ ಎಲ್ಲಾ ವಿಧವಾದ ತಪ್ಪುತಿಳುವಳಿಕೆಯಿಂದ ಬಿಡುಗಡೆಯಾದರು.

## ಪ್ರವೇಶಿಸುವ ಗಳಿಗೆ

*ಎರಡನೆಯದಾಗಿ, ತಂದೆ ಇರುವಲ್ಲಿ ನೇರವಾಗಿ ಪ್ರವೇಶಿಸುವ ಸಮಯವು ಬಂತು,* ಅದರ ಕುರಿತು ಯೇಸು,

> ಆ ದಿನದಲ್ಲಿ ನನ್ನ ಹೆಸರಿನ ಮೇಲೆ ಬೇಡಿ ಕೊಳ್ಳುವಿರಿ. ನಾನು ತಂದೆಯನ್ನು ನಿಮಗೋಸ್ಕರ ಕೇಳಿಕೊಳ್ಳುವೆನೆಂತ ನಿಮಗೆ ಹೇಳುವದಿಲ್ಲ; ನೀವು ನನ್ನ ಮೇಲೆ ಮಮತೆಯಿಟ್ಟು ನನ್ನನ್ನು ತಂದೆಯ ಬಳಿಯಿಂದ ಹೊರಟುಬಂದವನೆಂದು ನಂಬಿದ್ದರಿಂದ ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ (16:26, 27).

ಹನ್ನೊಂದು ಜನರೊಂದಿಗೆ ಆತನು ಮಾಡಿದ ಹಿಂದಿನ ಚರ್ಚೆಯಲ್ಲಿ, ಅವರು ತಂದೆಗೆ, ಆತನ ಹೆಸರಿನಲ್ಲಿ ಕೇಳಿಕೊಳ್ಳುವದಾದರೆ, ತಂದೆಯು ಅದನ್ನು ದಯಪಾಲಿಸುವನು ಎಂದು ತಿಳಿಸಿದ್ದನು (16:23, 24), ಆದರೆ ಈಗ ಆತನಿಗೂ ಮತ್ತು ತಂದೆಗೂ ನಡುವೆ ಇದ್ದ ನಿಕಟ ಸಂಬಂಧದ ಬಗ್ಗೆ ಹೇಳುತ್ತಿರುವನು. ಅವರು ಮಗನೊಂದಿಗೆ ಮಾತನಾಡಿದ ಹಾಗೆ ತಂದೆಯೊಂದಿಗೂ ಮಾತನಾಡಬಹುದಿತ್ತು. ಲೋಕದ ಉತ್ಪತ್ತಿಗೆ ಮೊದಲೇ ಯೇಸು ತಂದೆಯೊಂದಿಗಿದ್ದನು; ಈಗ ಆತನು ತಂದೆಯ ಬಳಿಗೆ ಹಿಂದಿರುಗುತ್ತಿದ್ದನು. ಯೇಸು ತಂದೆಯಿಂದ ಬಂದವನು ಎಂದ ಅಪೊಸ್ತಲರು ನಂಬಿದ್ದರಿಂದ, ತಂದೆ ಮತ್ತು ಮಗನು ಅವರ ಭಿನ್ನಹವನ್ನು ಮನ್ನಣೆ ಮಾಡುತ್ತಿದ್ದರು.

ಅಪೊಸ್ತಲರು ಹಾಗೂ ಸಕಲ ವಿಶ್ವಾಸಿಗಳು ತಂದೆ ಮತ್ತು ಮಗನ ಬಳಿಗೆ ಪ್ರವೇಶ ಮಾಡುವ ಅವಕಾಶ ಹೊಂದಿದ್ದಾರೆ. ಪೌಲನು, ಯೆಶಾಯ 57:19ರ ಗ್ರಂಥದಿಂದ,

> ಇದಲ್ಲದೆ ಆತನು ಬಂದು ದೂರವಾಗಿದ್ದ ನಿಮಗೂ ಸಮಾಧಾನವನ್ನು ಮತ್ತು ಸಮೀಪವಾಗಿದ್ದವರಿಗೂ ಸಮಾಧಾನವನ್ನು ಮತ್ತು ಸಮೀಪವಾಗಿದ್ದವರಿಗೂ ಸಮಾಧಾನವನ್ನು ಸಾರಿದನು. ಆತನ ಮೂಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ

ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗವಾ ಯಿತು (ಎಫೆಸ 2:17, 18).

ಆತನು ಅಪೊಸ್ತಲರಿಗೆ ಏನನ್ನು ತಿಳಿಸಿರುವನೋ, ಅದು ನಮಗೂ ಸಹ ಅನ್ವಹಿಸುವ ಪ್ರಾರ್ಥನೆಯ ಮಹತ್ತರವಾದ ಅವಕಾಶವಾಗಿದೆ. ಯೇಸುವಿನ ಮೂಲಕ ಅವರು ಪ್ರಾರ್ಥಿಸಬೇಕಿತ್ತು ಯಾಕೆಂದರೆ ಆತನು ತಂದೆಯ ಬಲಗಡೆಯಲ್ಲಿದ್ದನು. ಯೇಸು ತಂದೆಯಲ್ಲಿ ಒಂದಾಗಿದ್ದರಿಂದಲೂ, ಅಪೊಸ್ತಲರನ್ನು ಬಹಳವಾಗಿ ಪ್ರೀತಿ ಮಾಡಿದ್ದರಿಂದಲೂ, ತಂದೆಯೂ ಸಹ ಅವರನ್ನು ಪ್ರೀತಿಸುತ್ತಿದ್ದನು. ಮಗನು ತಂದೆಯಿಂದ ಕಳುಹಿಸಲ್ಪಟ್ಟವನು ಎಂದು ಅವರು ನಂಬಿದ್ದರಿಂದ, ತಂದೆಯೂ ಸಹ ಅವರನ್ನು ಮಾನ್ಯಮಾಡಿ ಆಶೀರ್ವಾದಿಸುತ್ತಿದ್ದನು.

## ನಂಬಿಕೆಯ ಒಂದು ಗಳಿಗೆ

*ಮೂರನೆಯದಾಗಿ ಅದು ಗೌರವಾನಿತ್ವ ನಂಬಿಕೆಯ ಸಮಯವಾಗಿತ್ತು.* ಪುನಃ ಆತನ ಮಾತುಗಳನ್ನು ಆಲೋಚಿಸೋಣ:

> ಆ ದಿನದಲ್ಲಿ ನನ್ನ ಹೆಸರಿನ ಮೇಲೆ ಬೇಡಿ ಕೊಳ್ಳುವಿರಿ. ನಾನು ತಂದೆಯನ್ನ ನಿಮಗೋಸ್ಕರ ಕೇಳಿಕೊಳ್ಳುವೆನೆಂತ ನಿಮಗೆ ಹೇಳುವದಿಲ್ಲ; ನೀವು ನನ್ನ ಮೇಲೆ ಮಮತೆಯಿಟ್ಟು ನನ್ನನ್ನು ತಂದೆಯ ಬಳಿಯಿಂದ ಹೊರಟುಬಂದವನೆಂದು ನಂಬಿದ್ದರಿಂದ ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ. ತಂದೆಯ ಬಳಿಯಿಂದ ಹೊರಟು ಈ ಲೋಕಕ್ಕೆ ಬಂದಿದ್ದೇನೆ; ಇನ್ನು ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗುತ್ತೇನೆ ಅಂದನು (16:26-28).

ಯೇಸುವಿನ ಧೈವೀಕ ಶಕ್ತಿಯನ್ನು ಆಧರಿಸಿ, ಅಪೊಸ್ತಲರು ನಂಬಿಕೆಯ ಒಂದು ಸಂಸ್ಥೆಯನ್ನು ಕಟ್ಟುತ್ತಿದ್ದರು. ಇದರಲ್ಲಿ ಅವರು ಭರವಸದಿಂದಿದ್ದು, ಯೇಸು "ತಂದೆಯಿಂದ ಬಂದವನೆಂದು ನಂಬಿದ್ದರು."

ಆತನು ಪುನರುತ್ಥಾನ ಹೊಂದದ ನಂತರ, ಹಲವಾರು ವಿಧದಲ್ಲಿ ತಾನು ಮರಣದಿಂದ ಎದ್ದು ಬಂದವನೆಂದು ಪ್ರಕಟಿಸಿದ್ದನು (ಅಪೊಸ್ತಲರ ಕೃತ್ಯಗಳು 1:2, 3). ನಂತರ ಅಪೊಸ್ತಲರು ಸಹ, ಆತನು ಎದ್ದು ಬಂದ ಕ್ರಿಸ್ತನೆಂದು ಯೆರೂಸಲೇಮಿನಲ್ಲಿಯೂ, ಯುದಾಯದಲ್ಲಿಯೂ, ಸಮಾರ್ಯದಲ್ಲಿಯೂ ಹಾಗೂ ಲೋಕದ ಕಟ್ಟಕಡೆಯವೆಗೂ ಸಾಕ್ಷಿ ಹೇಳಿದರು (ಅಪೊಸ್ತಲರ ಕೃತ್ಯಗಳು 1:8). ಕ್ರೈಸ್ತ ಯುಗದ ಆರಂಭವು ನಂಬಿಕೆಯ ಪರಿಪೂರ್ಣತೆಯಾಗಿತ್ತು.

ಅಪೊಸ್ತಲರ ಹಾಗೂ ಪ್ರೇರಿತರಾದ ಮನುಷ್ಯರ ಸಾಕ್ಷಿಯ ಮೂಲಕ ಯೇಸು ಕ್ರಿಸ್ತನ ಮರಣ ಹಾಗೂ ಪುನರುತ್ಥಾನವನ್ನು ಕಾಣುತ್ತೇವೆ. ದೇವರು ತನ್ನ ಯೋಜನೆಗಳನ್ನೂ ಅನುಷ್ಟಾನ ಮಾಡಲು, ತನ್ನ ಮಗನಲ್ಲಿ ಸಾಕ್ಷಿಯನ್ನು ಇಟ್ಟಿರುವನು. ಆದ್ದರಿಂದ ನಂಬಲಪೇಕ್ಷಿಸುವವನು ನಂಬಬಹುದು.

## ಮುಕ್ತಾಯ

ಆ ದಿನ ರಾತ್ರಿ ಮೇಲುಪ್ಪರಿಗೆಯಲ್ಲಿ, ಮರಣದ ನೆರಳಿನ ನಂತರದ ಕಾರ್ಯವನ್ನು ಗಮನಿಸಿರಿ ಎಂದು ಹೇಳಿದನು. ತಿರಸ್ಕರ ಹಾಗೂ ಕೆಟ್ಟ ಸಂಗತಿಯ ನಂತರ ಹೊಳೆಯುವ ಆಶೀರ್ವಾದದ ದಿನವನ್ನು ನೋಡಿರಿ ಅಂದನು. ಮುಂದೆ ಬರುವದಕ್ಕಿದ್ದ ಗಳಿಗೆಯು ತಿಳುವಳಿಕೆಯು, ದೇವ ಸನ್ನಿಧಿಗೆ ಪ್ರವೇಶಿಸುವ, ಹಾಗೂ ನಂಬಿಕೆಯು, ಒಂದು ಗಳಿಗೆಯಾಗಿತ್ತು. ಆ ಗಳಿಗೆಯು ಬಂದಾಗ, ಆಶೀರ್ವಾದ ನಿಮಿತ್ತವಾಗಿ ಅಪೊಸ್ತಲರು ಹಿಂಸೆಯನ್ನು ಅನುಭವಿಸಿದರು. ಅವರು ಗಳಿಗೆಯ ಆರಂಭದಲ್ಲಿ ಇದ್ದು ಅದನ್ನು ಸೃಷ್ಟಿ

ಮಾಡಿದರು. ನಾವುಗಳು ಸಹ ಆ ಸಮಯದಲ್ಲಿಯೇ ಜೀವಿಸುತ್ತಿದ್ದೇವೆ. ಇತರರಿಗಿತಲೂ ನಾವುಗಳು ಆಶೀರ್ವಾದ ಹೊಂದಿದ ಜನರಾಗಿದ್ದೇವೆ ಅದು ನಿಸ್ಸಂಶಯ ನಾವು ಆ ಗಳಿಗೆಯಲ್ಲಿ ಆನಂದ ಪಡುವ ಅವಕಾಶವನ್ನು ದೇವರು ನೀಡಿರುವನು.

---

*"ಆ ಯೇಸುವಿನ ಹೆಸರನ್ನು ಎತ್ತಿ ಹೇಗೂ ಮಾತಾಡಬಾರದು, ಉಪದೇಶಮಾಡಲೂ ಬಾರದು ಎಂದು ಅವರಿಗೆ ಖಂಡಿತವಾಗಿ ಅಪ್ಪಣೆಕೊಟ್ಟರು. ಅದಕ್ಕೆ ಪೇತ್ರ ಯೋಹಾನರು ಅವರಿಗೆ - ದೇವರ ಮಾತನ್ನು ಕೇಳುವದಕ್ಕಿಂತಲೂ ನಿಮ್ಮ ಮಾತನ್ನು ಕೇಳುವದು ದೇವರ ಮುಂದೆ ನ್ಯಾಯವೋ ಏನು? ನವೇ ತೀರ್ಪುಮಾಡಿಕೊಳ್ಳಿರಿ; ನಾವಂತೂ ಕಂಡು ಕೇಳಿದ್ದನ್ನು ಹೇಳದೆ ಇರಲಾರೆವು ಎಂದು ಉತ್ತರಕೊಟ್ಟರು" (ಅಪೊಸ್ತಲರ ಕೃತ್ಯಗಳು 4:18-20).*